## ನಿವೇದನೆ

# ಕಂಗೆಡಿಸುತ್ತಿರುವ ‘ಕಣ್ಮರೆ’

ಕಾಣೆಯಾದವರ ಬವಣೆ ಭಯಾನಕ. ಈಗಿನ ದಿನಮಾನದಲ್ಲಿ ಒಂಟಿಯಾಗಿ ಜೀವನ ಸವೆಸುವುದು ಸುಲಭವಲ್ಲ. ಮಹಿಳೆಯರೋ ಮಕ್ಕಳೋ ಆದರೆ ಅವರ ಪಾಡು ಹೇಳತೀರದು. ಹೆಣ್ಣುಮಕ್ಕಳಾದರಂತೂ ಕಳ್ಳಸಾಗಣೆ, ವೇಶ್ಯಾವಾಟಿಕೆಯಂತಹ ದುಷ್ಟಜಾಲಕ್ಕೆ ಸಿಲುಕುವ ಅಪಾಯ ಇರುತ್ತದೆ.

‘ಗೋಧಿ ಬಣ್ಣ ಸಾಧಾರಣ ಮೈಕಟ್ಟು’ ಸಿನಿಮಾ ನೋಡಿದವರಿಗೆ ನಮ್ಮ ಕಾಲದ ಬಹುಮುಖ್ಯ ತಲ್ಲಣದ ಬೇರೆ ಬೇರೆ ಮಜಲುಗಳು ಕಣ್ಣೆದುರು ತೆರೆದುಕೊಳ್ಳುತ್ತವೆ. ಈ ಸಿನಿಮಾದ ಕಥೆ ನೂರಕ್ಕೆ ನೂರರಷ್ಟು ನಮ್ಮ ಕಾಲದ್ದು. ನಮ್ಮ ಮಹಾನಗರಗಳ ಜೀವನಶೈಲಿಗೆ ಸಂಬಂಧಿಸಿದ್ದು. ಮತ್ತೊಬ್ಬರನ್ನು ಗಮನಿಸಲೂ ಆಗದಂತಹ ಜಂಜಡ ಹೇಗೆ ಬದುಕಿನ ಲಯ ತಪ್ಪಿಸಿದೆ ಎಂಬುದನ್ನು ಹೇಳುವಂತಹುದು. ಅಲ್ಜಮೈರ್‌ನಿಂದ ಮರೆಗುಳಿಯಾದ ಹಿರಿಯ ನಾಗರಿಕರೊಬ್ಬರು ಕಾಣೆಯಾಗುವುದು ಚಿತ್ರಕಥೆಯ ಕೇಂದ್ರಬಿಂದು.

ಅದು, ಒಬ್ಬ ವ್ಯಕ್ತಿಯ ಕಥೆ. ಆದರೆ ಹೀಗೆ ಕಾಣೆಯಾಗುವವರ ಸಂಖ್ಯೆ ನಮ್ಮ ಬೆಂಗಳೂರಿನಲ್ಲಿ ದಿನೇ ದಿನೇ ಹೆಚ್ಚುತ್ತಿದೆ. ಇವರಲ್ಲಿ ಮಹಿಳೆಯರು, ಮಕ್ಕಳು, ವೃದ್ಧರು ಎಲ್ಲರೂ ಸೇರಿದ್ದಾರೆ ಮತ್ತು ಕೆಲವರ ಇರುವಿಕೆಯೇ ಪತ್ತೆಯಾಗುತ್ತಿಲ್ಲ ಎಂಬುದು ಕಳವಳಕಾರಿ. ಬೆಂಗಳೂರು ನಗರ ಪೊಲೀಸ್ ಸುಪರ್ದಿಯಲ್ಲಿರುವ ‘ಮಿಸ್ಸಿಂಗ್ ಪರ್ಸನ್ಸ್ ಬ್ಯೂರೊ’ ಮಾಹಿತಿಯನ್ನು ಆಧರಿಸಿ ಹೇಳುವುದಾದರೆ ಈ ನಗರದಲ್ಲಿ ಪ್ರತಿತಿಂಗಳು ಏನಿಲ್ಲವೆಂದರೂ 400 ಮಂದಿ ಕಾಣೆಯಾಗುತ್ತಿದ್ದಾರೆ. ಕೆಲವರು ಹೇಗೋ ತಾವಾಗಿಯೇ ಮನೆಗೆ ಮರಳುತ್ತಾರೆ. ಕೆಲವರನ್ನು ಆಪ್ತೇಷ್ಟರು ಹುಡುಕಿ ಕರೆತರುತ್ತಾರೆ. ಪೊಲೀಸರಿಂದಲೂ ಕೆಲವರು ಪತ್ತೆಯಾಗಬಹುದು. ಆದರೆ ಕಾಣೆಯಾದ ಪ್ರತಿಯೊಬ್ಬರೂ ಮರಳಿ ಮನೆ ಸೇರುತ್ತಾರೆ ಎಂಬ ಯಾವ ಖಾತರಿಯೂ ಇಲ್ಲ. ಪತ್ತೆಯಾಗುವವರ ಸರಾಸರಿ ಸಂಖ್ಯೆ ತಿಂಗಳಿಗೆ 280. ಅಂದರೆ ಉಳಿದ 120 ನತದೃಷ್ಟರ ಪಾಡು ಏನೋ ಎಂತೋ!

ಪತ್ತೆಯಾಗದಿರುವುದರ ಹಿಂದಿನ ಕಾರಣಗಳು ಬೇರೆ ಬೇರೆ ಆಗಿರುತ್ತವೆ. ಅಪಹರಣ ಇರಬಹುದು. ಮಾನವ ಕಳ್ಳಸಾಗಣೆಯಿಂದ ಆಗಿರಬಹುದು. ಕೆಲವರು ದುರ್ಮರಣಕ್ಕೆ ಈಡಾಗಿರಲೂಬಹುದು. ಆದರೆ ಬಂಧು–ಬಾಂಧವರಲ್ಲಿ ಅದು ಉಳಿಸುವ ನೋವು–ಸಂಕಟ ಇದೆಯಲ್ಲ, ಅದು ಜೀವನಪರ್ಯಂತ ಬಾಧಿಸುತ್ತದೆ. ಏನಾದರೋ, ಎಲ್ಲಿ ಹೋದರೋ, ಎಂದಾದರೂ ಮರಳಿ ಬರಬಹುದೇ ಎಂಬಿತ್ಯಾದಿ ಪ್ರಶ್ನೆಗಳು ಕಾಡುತ್ತಲೇ ಇರುತ್ತವೆ. ಮನಸ್ಸಿನ ನೆಮ್ಮದಿಗೆ ಸಂಚಕಾರ ತರುವಂತಹ ಕೊರಗು ಅದು.

ಮಕ್ಕಳನ್ನೋ, ಇನ್ನಿತರ ಆಪ್ತರನ್ನೋ ಕಳೆದುಕೊಂಡವರ ಸಂಕಟ ಒಂದು ಬಗೆಯದಾದರೆ, ಕಾಣೆಯಾದವರ ಬವಣೆ ಮತ್ತೂ ಭಯಾನಕ. ಈಗಿನ ದಿನಮಾನದಲ್ಲಿ ಒಂಟಿಯಾಗಿ ಜೀವನ ಸವೆಸುವುದು ಸುಲಭವಲ್ಲ. ಮಹಿಳೆಯರೋ ಮಕ್ಕಳೋ ಆದರೆ ಅವರ ಪಾಡು ಹೇಳತೀರದು. ಹೆಣ್ಣುಮಕ್ಕಳಾದರಂತೂ ಕಳ್ಳಸಾಗಣೆ, ವೇಶ್ಯಾವಾಟಿಕೆಯಂತಹ ದುಷ್ಟಜಾಲಕ್ಕೆ ಸಿಲುಕುವ ಅಪಾಯ ಇರುತ್ತದೆ. ಅಂಥವರಿಗೆ ದುಷ್ಟರ ದೃಷ್ಟಿಗೆ ಬೀಳದ ಹಾಗೆ ಬದುಕುವುದೇ ಕಡುಕಷ್ಟವಾಗಬಹುದು.

ಕಾಣೆಯಾಗುವುದಕ್ಕೂ ಏನೇನೋ ಕಾರಣಗಳು ಇರುತ್ತವೆ. ಕೆಲವು ಗಂಭೀರ ಸ್ವರೂಪದ್ದಾಗಿದ್ದರೆ, ಇನ್ನು ಕೆಲವು ಕ್ಷುಲ್ಲಕ. ಸಿನಿಮಾ ನಟನಾಗುವ ಭ್ರಮೆಗೆ ಬಿದ್ದು ಓಡಿಹೋದ ಮಕ್ಕಳು–ಯುವಕರ ನಿದರ್ಶನಗಳಿವೆ. ಪರೀಕ್ಷೆಯಲ್ಲಿ ಫೇಲಾಗಿದ್ದಕ್ಕೆ, ಅಂಕಗಳು ಕಡಿಮೆ ಬಂದಿದ್ದಕ್ಕೆ, ಹೋಮ್‌ವರ್ಕ್ ಮಾಡಲಾಗಿಲ್ಲ ಎಂಬ ಭಯಕ್ಕೆ ಮನೆ ತೊರೆದವರಿದ್ದಾರೆ. ಮದುವೆ ವಿಷಯದಲ್ಲಿ ಕಿರಿಕಿರಿ, ಪ್ರೇಮ ವಿವಾಹಕ್ಕೆ ಅಡ್ಡಿ, ಸಾಲ ತೀರಿಸಲಾಗದ ಅಸಹಾಯಕತೆ, ನಿರುದ್ಯೋಗದಂತಹ ಸಮಸ್ಯೆಗಳೂ ವ್ಯಕ್ತಿಯನ್ನು ಇಂತಹ ಪಲಾಯನ ಮಾರ್ಗಕ್ಕೆ ದೂಡುವುದುಂಟು. ಅಲ್ಜಮೈರ್ (ಮರೆವು), ಮೆದುಳಿಗೆ ಆಘಾತ, ಮಾನಸಿಕ ಅಸ್ವಸ್ಥತೆಯಂಥ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳ ಪಾತ್ರವೂ ಇದೆ. ಮಕ್ಕಳು, ಉದ್ಯೋಗಸ್ಥರಿಗೆ ಶಾಲೆ–ಕಚೇರಿಗಳಲ್ಲಿ ಒತ್ತಡಗಳು ಎದುರಾಗುವುದು ಸಹಜ. ಅದನ್ನು ನಿಭಾಯಿಸುವ ಜಾಣ್ಮೆ ರೂಢಿಸಿಕೊಳ್ಳಬೇಕು. ಮಕ್ಕಳಿಗೆ ಸಹಪಾಠಿಗಳು, ಶಿಕ್ಷಕರು ಮತ್ತು ಪೋಷಕರು ಬೆಂಬಲವಾಗಿ ನಿಂತರೆ ಕಲಿಕೆ ಕಷ್ಟವಾಗಲಾರದು, ಒತ್ತಡ ತಾನಾಗಿಯೇ ನಿವಾರಣೆಯಾಗುತ್ತದೆ. ಕೆಲಸದ ಸ್ಥಳದಲ್ಲಿ ಸಹೋದ್ಯೋಗಿಗಳ ಭಾವನಾತ್ಮಕ ಬೆಂಬಲ, ಒತ್ತಡಕ್ಕೆ ಸಿಲುಕಿದ ವ್ಯಕ್ತಿಯ ಮನಸ್ಸಿನ ‘ಭಾರ’ ಇಳಿಸಬಹುದು.

ಕಾಣೆಯಾಗುವ ಈ ಸಮಸ್ಯೆಯನ್ನು ಪೂರ್ತಿ ತಡೆಯಲಿಕ್ಕೆ ಆಗದಿದ್ದರೂ ತಕ್ಕಮಟ್ಟಿಗೆ ನಿಯಂತ್ರಿಸಬಹುದು. ಕುಟುಂಬದಲ್ಲಿ ಯಾರಾದರೂ ಕಾಣೆಯಾದರೆ ಕೂಡಲೇ ಪೊಲೀಸ್ ಠಾಣೆಗೆ ಮಾಹಿತಿ ಮುಟ್ಟಿಸಬೇಕು. ಪತ್ತೆಹಚ್ಚುವ ಪ್ರಕ್ರಿಯೆಯಲ್ಲಿ ಆರಂಭಿಕ ಹಂತ ಮಹತ್ವದ ಪಾತ್ರ ವಹಿಸುತ್ತದೆ. ಮುಚ್ಚಿಡುವ ಸ್ವಭಾವ ನಮ್ಮಲ್ಲಿ ಹೆಚ್ಚು. ನೆರೆಹೊರೆಯವರಿಗೆ ಗೊತ್ತಾದರೆ ಆಡಿಕೊಳ್ಳುತ್ತಾರೆ ಎಂಬ ಅಳುಕಿನಿಂದ ಎಷ್ಟೋ ಮಂದಿ ಇಂತಹ ಪ್ರಸಂಗಗಳನ್ನು ಮುಚ್ಚಿಡುತ್ತಾರೆ. ಅದು ಒಳ್ಳೆಯದಲ್ಲ. ಇಂತಹ ಪ್ರಕರಣಗಳನ್ನು ಪೊಲೀಸರೂ ಗಂಭೀರವಾಗಿ ಪರಿಗಣಿಸಬೇಕು. ಪತ್ತೆಹಚ್ಚುವ ಪ್ರಕ್ರಿಯೆಗೆ ನವ ಮಾಧ್ಯಮಗಳನ್ನೂ ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು.

■ ಎನ್. ಉದಯಕುಮಾರ್


ಈಶ್ವರ್